ಯಾರೋ ತಾಳಗಳನ್ನು ಇವನ ಹತ್ತಿರಕ್ಕೆ ನೂಕಿದರು. ಅವುಗಳನ್ನು ಮೆಲ್ಲಗೆ ಕೈಗೆತ್ತಿಕೊಂಡ ಗುರುಸ್ವಾಮಿಯ ಕೈಗಳು ಅವನಿಗೇ ಗೊತ್ತಿಲ್ಲದಂತೆ ತತ್ವದ ನಡೆಯನ್ನು ಗುರುತಿಸಿ ತಾಳವನ್ನು ತನ್ನದನ್ನಾಗಿಸಿಕೊಂಡವು. ತತ್ವಭಜನೆ ತಾರಕಕ್ಕೇರಿತು.

ಗುರುವೇ ಗತಿಯೆನ್ನು ಮನವೇ । ತತ್ವ
ಗುರುವಿನ ಪದಕಿಂತ ಪೆರತೊಂದು ಘನವೇ ।
ಪೇಳ್
ಪೆರತೊಂದು ಘನವೇ ।ಗುರುವೇ।
ಗುರುವೇ ಗತಿಯೆನ್ನು ಮನವೇ...

ತತ್ವಭಜನೆ ಮುಗಿದು ಹರನಮಃಪಾರ್ವತಿಪತಯೇ ಎಂದು ಎಲ್ಲರೂ ಮಂಗಳಕ್ಕೆ ಸಿದ್ಧವಾದರು. ಏಕತಾರಿ ಮತ್ತು ದಮ್ಮಡಿಗಳನ್ನು ಕೈಗೆತ್ತಿಕೊಂಡು ಅಜ್ಜಯ್ಯನ ಗದ್ದುಗೆ ಸುತ್ತ ನಿಂತರು. ಮಂಗಳಾರತಿ ಎತ್ತಿದಾಗ 'ಜ್ಞಾನಪೂರ್ಣಂ ಜಗಂಜೋತಿ ನಿರ್ಮಲವಾದ ಮನವೇ ಕರ್ಪೂರದಾರತಿ' ತತ್ವವನ್ನು ಎಲ್ಲರೂ ಏಕಕಂಠದಿಂದ ಹಾಡಿ ಅಜ್ಜಯ್ಯನ ಗದ್ದುಗೆ ಸುತ್ತ ಮೂರು ಸುತ್ತು ಸುತ್ತಿ ಬಂದರು. ಕಟ್ಟಳೆ ಮಾಡಿಸುತ್ತೇವೆ ಎಂದು ಹರಕೆ ಮಾಡಿಕೊಂಡಿದ್ದವರು ಪುರಿಉಸುಳಿ ಮಾಡಿಕೊಂಡು ಬಂದಿದ್ದರು. ಅದನ್ನು ಮುತ್ತುಗದ ಎಲೆಗೆ ಹಾಕಿ ಎಲ್ಲರಿಗೂ ಕೊಟ್ಟರು. ಗುರುಸ್ವಾಮಿಗೆ ಹಸಿವಾಗಿತ್ತೇನೋ ಕೊಟ್ಟ ಉಸುಳಿಗೆ ಕೈಬಾಯಿಗಳು ಅರ್ಪಿತವಾದವು. ಒಬ್ಬೊಬ್ಬರಾಗಿ ಎಲ್ಲ ಹೊರಟು ಹೋದ ಮೇಲೆ ಗುರುಸ್ವಾಮಿಗೆ ಏನೂ ತೋಚಲಿಲ್ಲ. ಆ ಗದ್ದುಗೆಗೆ ಬಾಗಿಲಿರಲಿಲ್ಲ. ಒಬ್ಬನೇ ಮೂಲೆಯಲ್ಲಿ ಸ್ವಲ್ಪ ಹೊತ್ತು ಕೂತ. ಬರುವಾಗ ಇದ್ದ ತಾಕಲಾಟ ಈಗ ಕಡಿಮೆ ಆಗಿತ್ತು. ಮತ್ತೆ ಮನಸ್ಸಿನಲ್ಲಿ ಅವೇ ತತ್ವಪದಗಳು ಗುನುಗುಡುತ್ತಿದ್ದವು. ಅವುಗಳನ್ನೇ ಧೇನಿಸುತ್ತ ಕೂತ ಗುರುಸ್ವಾಮಿಗೆ ಯಾವಾಗ ನಿದ್ದೇ ಹತ್ತಿತೋ...

ಈ ಸಲ ಮುಂಗಾರುಮಳೆ ಚೆನ್ನಾಗಿ ನಡೆಸಿತ್ತು. ಬಾರೆಮ್ಯಾಗಲಿನ ಹೊಲಕ್ಕೆ ಹೆಸರು ಎಳ್ಳು ಬೆರೆಸಿ ಬಿತ್ತಿದ್ದು ತಿರುತಿರುಗಿ ಮಳೆಯಾಗಿದ್ದರಿಂದ ಹಸಿರು ಮಳ್ಳುತ್ತಿದ್ದವು. ಮರಳ್ವಾಸಿಗೆ ಹೊಲವಾದ್ದರಿಂದ ಹೆಸರುಗಿಡ ಮುರುಮುರು ಅಂತಿದ್ದವು. ಹೆಸರು ಕಾಯಿ ಕಾಳುಗಟ್ಟಲಾರಂಭಿಸಿದ್ದವು. ಅವೆಲ್ಲಿದ್ದವೋ ಇತ್ತೀಚೆಗೆ ಹಿಂಡು ಹಿಂಡು ನವಿಲುಗಳು ಹೆಸರುಗಿಡಕ್ಕೆ ಮುಕುರಿಬಿದ್ದಿದ್ದವು. ಸಾಲುಹಿಡಿದು ಹೆಸರುಕಾಯಿ ವಡಚಲಾರಂಭಿಸಿದ್ದವು. ಈಕಡಿಂದ ಓಡಿಸಿದರೆ ಆಕಡಿಂದ ಮತ್ತೆ ಮುಕುರುತ್ತಿದ್ದವು. ಇವತ್ತು ಯಾವ ನವಿಲುಗಳೂ ಕಾಣಲಿಲ್ಲ. ಆದರೆ, ಅದ್ಯಾರೋ ಒಬ್ಬ ಬೆಳೆದ ಹೊಲದಲ್ಲಿ ಅಡ್ಡ ನುಗ್ಗಿಹೋಗುತ್ತಿದ್ದುದು ಕಾಣಿಸಿತು. ಆಗೊಮ್ಮೆ ಈಗೊಮ್ಮೆ ಬಗ್ಗಿ ಹೆಸರುಕಾಯಿ ಕುಯ್ಯುತ್ತಿರುವ ಹಾಗೆ ಕಾಣಿಸಿತು. ಹೆಂಗಾರ ಆಗಲಿ ಹತ್ತಿರ ಹೋಗಿ ನೋಡೋಣ ಅಂತ ಹೋಗಿ ನೋಡಿದಾಗ ಹುಚ್ಚೀರಜ್ಜ!

ಸದಾ ಹೆಗಲಮೇಲೊಂದು ಗೋಣಿಚೀಲವನ್ನು ಹೊದ್ದುಕೊಂಡು ತಿರುಗುವ ಹುಚ್ಚೀರಜ್ಜನಿಗೆ ಊರ ಸ್ಮಶಾನದ ಹಾಳು ಮಂಟಪವೇ ಮನೆ. ಅಲ್ಲಿ ಅನೇಕ ಸರ್ಪಗಳನ್ನು ಸಾಕಿಕೊಂಡಿದ್ದಾನೆಂದೂ, ಗೋಣಿಚೀಲದಲ್ಲಿ ಚಿನ್ನದ ಗಟ್ಟಿಗಳನ್ನು ಇಟ್ಟಿದ್ದಾನೆಂದೂ, ಆ ನಿಧಿಯನ್ನು ಕಾಯಲು ಸರ್ಪಗಳನ್ನು ನೇಮಿಸಿಕೊಂಡಿದ್ದಾನೆಂದೂ ಏನೇನೋ ಕಥೆಗಳನ್ನು ಕೇಳಿದ್ದ. ಹುಚ್ಚೀರಜ್ಜ ಮಾತ್ರ ಹೆಗಲಮೇಲಿನ ಗೋಣಿಚೀಲವನ್ನು ಎಲ್ಲಿಯೂ ಕೆಳಗೆ ಇಕ್ಕಿದ್ದಿಲ್ಲ. ಅವನೊಬ್ಬ ಅವಧೂತನೆಂದೂ, ಪವಾಡಪುರುಷನೆಂದೂ ಜನ ಕಾಲಿಗೆ ಬೀಳುತ್ತಿದ್ದರು. ಸಣ್ಣಮಕ್ಕಳನ್ನು ಅಜ್ಜನ ಕಾಲಿಗೆ ಕೆಡವುತ್ತಿದ್ದರು. ಹುಚ್ಚೀರಜ್ಜ ಏನೋ ಬಡಬಡಿಸುತ್ತ ಯಾರಾದರೂ ಚಿಲ್ಲರೆ ಕಾಸು ಕೊಟ್ಟರೆ ಇಸುಕೊಳ್ಳುತ್ತಿತ್ತು. ಒಮ್ಮೊಮ್ಮೆ ಇಸಕೊಂಡು ಬೀಸಿ ಒಗೆದುಬಿಡುತ್ತಿತ್ತು. ನಮ್ಮೂರಲ್ಲಿ ಇದ್ದ ಸಿದ್ಲಿಂಗಮ್ಮನ ಹೋಟಲಿಗೆ ಹೋಗಿ ಒಂದು ಪಾವಲಿ ಕೊಟ್ಟು ಒಂದೇ ಇಡ್ಲಿ ಕಟ್ಟಿಸಿಕೊಂಡು ಹೋಗುತ್ತಿದ್ದ ಅಜ್ಜ ಮತ್ತೆ ಕಾಣಿಸಲು ತಿಂಗಳಾಗಬೇಕಿತ್ತು. ಹೋದದ್ದು ಬಂದದ್ದು ಒಂದೂ ಗೊತ್ತಾಗುತ್ತಿರಲಿಲ್ಲ. ಹುಣ್ಣಿಮೆ ಅಮಾಸೆ ಕಟ್ಟೆಗಳಿಗೆ ಮಾತ್ರ ಬಯಲಪ್ಪನ ಗದ್ದುಗೆಗೆ ತಪ್ಪದೆ ಬರುತ್ತಿತ್ತು. ಅಲ್ಲಿ ಬಂಗಿಸೇದಿ ಸುಮ್ಮನೆ ಕೂತಿರುತ್ತಿತ್ತು. ಬಂದವರು ಅಜ್ಜನಿಗೆ ಕಾಲುಮುಟ್ಟಿ ನಮಸ್ಕರಿಸುತ್ತಿದ್ದರು. ಅವರನ್ನು ಮಾತ್ರ ಹುಚ್ಚೀರಜ್ಜ ಬಲೇ ಅಕ್ಕರಾಸ್ತೆಯಿಂದ ಮುಟ್ಟಿ ಮುಟ್ಟಿ ಹರಸುತ್ತಿತ್ತು.

ಹೆಸರುಕಾಯಿ ಕೊಯ್ದುಕೊಳ್ಳುತ್ತಿದ್ದ ಹುಚ್ಚೀರಜ್ಜನನ್ನ ಗದರಲು ಬಾಯಿ ತೆರೆದರೂ ಅದ್ಯಾಕೋ ದನಿಯೇ ಹೊರಗೆ ಬರಲಿಲ್ಲ. ಬಹಳ ಹಳೆಯ ನೆನಪೊಂದು